ಹಾದಿಗಳಲ್ಲಿ ಅತ್ಯಂತ ಗಂಭೀರವಾಗಿ ನಡೆಸಿತು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಪ್ರಶಸ್ತಿವಿಜೇತ ಕನ್ನಡ ಹಾಗೂ ಮಲೆಯಾಳಂ ಚಲನಚಿತ್ರಗಳಿಗೆ ಹಿನ್ನೆಲೆ ಸಂಗೀತ, ಚಿತ್ರಗೀತೆಗಳಿಗೆ ಸಂಗೀತ ಸಂಯೋಜನೆ, ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ಅಧ್ಯಾಪನ, ಡಾ. ನಾ. ರತ್ನ ಅವರ ನಾಟಕಕ್ಕೆ, ಮತ್ತು ಸಮುದಾಯ ಸಂಘಟನೆಯ ಎಂ.ಎಸ್. ಸತ್ಯು ಅವರ 'ಕುರಿ' ನಾಟಕಕ್ಕೆ ಸಂಗೀತ ಸಂಯೋಜನೆ – ಇಲ್ಲೆಲ್ಲಾ ಅವರು ತಮ್ಮ ಛಾಪು ಮೂಡಿಸಿದರು.

ಇವೆಲ್ಲವೂ ಬಾಲ್ಯದಲ್ಲಿ ಅವರಿಗರಿವಿಲ್ಲದೆಯೇ ಪ್ರಾರಂಭವಾಯಿತು. "ನನ್ನ ತಂದೆ ಪಂಡಿತ ತಾರಾನಾಥರು ಒಂದು ರೀತಿ ಲಿಯೊನಾರ್ಡೋ ದ ವಿನ್ಸಿ ಇದ್ದ ಹಾಗೆ – ಅವರು ತಬಲವಾದಕರು, ಗಾಯಕರು, ಸ್ವಾತಂತ್ರ್ಯಯೋಧರು, ಸಮಾಜ ಸುಧಾರಕರು, ಅಲೋಪತಿ, ಆಯುರ್ವೇದ ಹಾಗೂ ಯುನಾನಿ ವೈದ್ಯರು, ಎಲ್ಲವೂ ಆಗಿದ್ದರು. ಬಹುಶಃ ತಮ್ಮ ಸಾವಿನ ಬಗ್ಗೆ ಅವರಿಗೆ ಹತ್ತು ವರ್ಷ ಮೊದಲೇ ಗೊತ್ತಿತ್ತು ಅನ್ನಿಸುತ್ತೆ. ಹಾಗಾಗಿ ತಾವು ಸಾಯುವುದರೊಳಗೆ ತಮಗೆ ತಿಳಿದಿರುವ ಎಲ್ಲಾ ವಿದ್ಯೆಗಳನ್ನೂ ನನಗೆ ಕಲಿಸಬೇಕೆನ್ನುವ ತವಕ ಅವರಿಗೆ. ಅವರಿಗೆ ಅದೊಂದು ಟೈಂಬೌಂಡ್ ಕಾರ್ಯಕ್ರಮವಾಗಿತ್ತು. ನಾನು ಬೆಳಗ್ಗೆ ಕಣ್ಣು ಬಿಡುವಾಗಿನಿಂದಲೇ ನನ್ನ ಪಾಠ ಪ್ರಾರಂಭವಾಗುತ್ತಿತ್ತು. ಅವರು ಹೇಳಿಕೊಡುವುದೆಲ್ಲವನ್ನೂ ನಾನು ಹೇಳಬೇಕಿತ್ತು. ಕೆಲವೊಮ್ಮೆ ನನಗೆ 'ಪುಟ್ಟ, ಇದನ್ನು ನಾನು ಒಂದು ಸಲ ಹೇಳುತ್ತೇನೆ. ನೀನು ತಕ್ಷಣವೇ ನೆನಪಿಟ್ಟುಕೊಂಡು ಹೇಳಬೇಕು, ಇಲ್ಲದಿದ್ದರೆ ನೀನು ನನ್ನ ಮಗನೇ ಅಲ್ಲ' ಎನ್ನುತ್ತಿದ್ದರು. ಹೀಗೆ ಕೆಲವೊಮ್ಮೆ ತುಂಬ ಒತ್ತಡ ಇರುತ್ತಿತ್ತು. ನಮ್ಮ ತಂದೆ ಯಾವುದನ್ನೂ ಅಷ್ಟು ಸಲೀಸಾಗಿ ಒಪ್ಪುತ್ತಿರಲಿಲ್ಲ. ಒಮ್ಮೆ ಬೆಂಗಳೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ನಮ್ಮ ತಂದೆ ಮುಖ್ಯ ಅತಿಥಿಗಳು. ನನಗೆ ಹಾಡಲು ಹೇಳಿದ್ದರು. ನಾನು ಬಾಗೇಶ್ರೀ ರಾಗವನ್ನು ನನಗೆ ಸಾಧ್ಯವಾದಷ್ಟು ಮಟ್ಟಿಗೆ ವಿಸ್ತರಿಸಿ ಹಾಡಿದೆ. ಎಲ್ಲರೂ ಮೆಚ್ಚಿಕೊಂಡರು. ಅಮ್ಮನಿಗೂ ಸಾಕಷ್ಟು ಖುಷಿಯಾಗಿತ್ತು. ಆದರೆ ನಮ್ಮಪ್ಪ ಮಾತ್ರ 'ಬರುತ್ತೆ ಅಂತ ಸಿಕ್ಕಸಿಕ್ಕಲ್ಲಿ ತಾನ್‌ಗಳನ್ನು ಹೊಡೆದು ಮನಸ್ಸಿಗೆ ಬಂದಂತೆ ಗಮಕ ಹಾಡುವುದೇ?' ಎಂದು ದಾರಿಯುದ್ದಕ್ಕೂ ಬಯ್ಯುತ್ತಾ ಬಂದರು. ನನಗೆ ತುಂಬಾ ದುಃಖವಾಗಿತ್ತು. ಎಲ್ಲರೂ ಅಷ್ಟೊಂದು ಮೆಚ್ಚಿಕೊಂಡರೂ ಅಪ್ಪ ಮಾತ್ರ ಬೈಯುತ್ತಾನಲ್ಲ ಎಂದು ಅಳುವೇ ಬಂದಿತ್ತು. ನಮ್ಮಪ್ಪನ ಕ್ರಮವೇ ಹಾಗೆ. ಆದರೆ ಹೀಗೆ ಸಂಗೀತದ ಅಭಿರುಚಿ ಮಾತ್ರವಲ್ಲ, ಬದುಕಿನಲ್ಲಿ ಕಷ್ಟಕಾರ್ಪಣ್ಯಗಳನ್ನು ಧೈರ್ಯವಾಗಿ ಎದುರಿಸುವುದನ್ನೂ ನನಗವರು ಸಣ್ಣವಯಸ್ಸಿನಲ್ಲೇ ಕಲಿಸಿದರು."

ತಂದೆಯೇ ಮೊದಲ ಗುರು. "ಸ್ವರಶುದ್ಧತೆ, ರಾಗಭಾವ ಮತ್ತು ಸ್ವಾನುಭವ" ಇವು ಸಂಗೀತದಲ್ಲಿ ತುಂಬಾ ಮುಖ್ಯ ಎಂಬುದನ್ನು ಅವರು ಮನದಟ್ಟು ಮಾಡಿಸಿದ್ದರು. ಪಂಡಿತ್ ಸವಣೂರು ಕೃಷ್ಣಾಚಾರ್ಯರು, ಪಂಡಿತ್ ಸವಾಯಿ ಗಂಧರ್ವ ಅವರ ಮೊದಲ ಶಿಷ್ಯ ವೆಂಕಟರಾವ್ ರಾಮದುರ್ಗಕರ್ ಮತ್ತು ಪಂಚಾಕ್ಷರಿ ಗವಾಯಿಗಳಿಂದಲೂ ಕೆಲವು ರಾಗಗಳನ್ನು ಕಲಿಯುವ ಸುಯೋಗ ಅವರದಾಗಿತ್ತು. 1947 ಅಕ್ಟೋಬರ್ 31ರಂದು ಅವರ ತಂದೆ ತೀರಿಕೊಂಡು ಎರಡು ಗಂಟೆಗಳ ಕಾಲವಾಗಿತ್ತು, ಆದರೆ ಅವರ ತಂದೆಯ ಆಸೆಯಂತೆ ಅಂದು ನಿಗದಿಗೊಂಡಿದ್ದ ಅವರ ಸಂಗೀತ ತರಗತಿಗಳು ಪಂಡಿತ್ ಶಂಕರ್ ರಾವ್ ಜೋಶಿ ದೇವಗಿರಿಯವರಿಂದ ಪ್ರಾರಂಭವಾದವು. ಅದು ಆಗುವಂತೆ ಮಾಡಿದವರು ಅವರ ದೃಢ ಮನಸ್ಸಿನ ತಾಯಿ ಸುಮತೀಬಾಯಿ. ಇವೆಲ್ಲವೂ ರಾಜೀವ ತಾರಾನಾಥರ ವ್ಯಕ್ತಿತ್ವವನ್ನು ಬಾಲ್ಯದಲ್ಲಿ ರೂಪಿಸಿದವು.

"ನಾನು ಹೆಚ್ಚು ಕಡಿಮೆ ಹಾಡುಗಾರಿಕೆಯಲ್ಲೇ ಇದ್ದೆ. ಅದು ಬಿಟ್ಟರೆ ತಬಲಾ, ಸಿತಾರ್, ವಿಚಿತ್ರವೀಣೆ ಹೀಗೆ. ನನಗೆ ಸರೋದ್ ಬಗ್ಗೆ ಯಾವ ರೀತಿಯ ಆಕರ್ಷಣೆಯಾಗಲೀ, ಗೌರವವಾಗಲೀ ಇರಲಿಲ್ಲ. ಅದರ ಸ್ಟಕಾಟೋ ನಾದ ನನಗೆ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಸರೋದ್ ರೆಕಾರ್ಡುಗಳನ್ನು ಹಾಕಿದರೆ ನಾನು ಗದ್ದಲ ಮಾಡಿಬಿಡುತ್ತಿದ್ದೆ. ಅವುಗಳನ್ನು ತೆಗೆಯುವವರೆಗೂ ಬಿಡುತ್ತಿರಲಿಲ್ಲ ಅಥವಾ ಅಲ್ಲಿಂದ ಓಡಿಬಿಡುತ್ತಿದ್ದೆ. ಆದರೆ ನನ್ನ ಜೀವನದ ಬಹುದೊಡ್ಡ ವ್ಯಂಗ್ಯವೆಂದರೆ, ನಾನು ಯಾವ ನಾದವನ್ನು ಕೇಳಿದರೆ ಸಾಕು ಓಡಿ ಹೋಗುತ್ತಿದ್ದೆನೋ, ಈಗ ಅದೇ ನಾದದ ಜೊತೆಗೇ ಬದುಕುತ್ತಿದ್ದೇನೆ!"

ಇಪ್ಪತ್ತರ ಹರೆಯದಲ್ಲಿ ಪ್ರೀತಿ, ಪ್ರಣಯಕ್ಕೆ ಬೀಳುವ ಬದಲು, ದುಡ್ಡು ಮಾಡುವ ಬದಲು,